ದಿನಾಂಕಃ **17.07.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟಿ ಸವಾಲು ಃ ಪ್ರತಿವಾದಿ ಪರ ಶ್ರೀ. ಎಂ.ಪಿ ವಕೀಲರಿಂದಃ -

1. ಈ ದಾವೆಗೆ ಸಂಬಂಧಿಸಿದಂತೆ ವಾದಿ ಹಾಗೂ 1 ನೇ ಪ್ರತಿವಾದಿಯ ಮಧ್ಯೆ ನಡೆದ ಫ್ಯಾಬ್ರಿಕೇಷನ್ ಸಂಬಂಧಿಸಿದಂತೆ ಆದ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ನ್ಯಾಯಾಲಯದ ಆದೇಶದಂತೆ ನಿ.ಪಿ.20 ರಿಂದ 22 ರ ದಾಖಲೆಗಳನ್ನು ನಾನು ಹಾಜರುಪಡಿಸಿದ್ದೇನೆ. ಯಾವ ಉದ್ದೇಶಕ್ಕಾಗಿ ಸದರಿ ದಾಖಲೆಗಳನ್ನು ನಾನು ಹಾಜರುಪಡಿಸಿದ್ದೇನೆ ಎಂದರೆ ನ್ಯಾಯಾಲಯದಿಂದ ಸಮನ್ಸ್ ಆದ ಕಾರಣ ನಾನು ಅವುಗಳನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ.

2. ನನ್ನ ಮುಖ್ಯ ವಿಚಾರಣೆಯನ್ನು ನಾನೇ ಬರೆದುಕೊಟ್ಟಿದ್ದೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ 3 ರಿಂದ 7 ನೇ ಪ್ಯಾರಾದಲ್ಲಿ ವಿವರಿಸಿದ ಒಕ್ಕಣೆಗಳ ಬಗ್ಗೆ ನಾನು 1 ನೇ ಪ್ರತಿವಾದಿಗೆ ನೋಟೀಸು ನೀಡಿಲ್ಲ. 1 ನೇ ಪ್ರತಿವಾದಿಗೂ ನನ್ನ ಮುಖ್ಯ ವಿಚಾರಣೆಯ 4 ನೇ ಪ್ಯಾರಾದಲ್ಲಿ ವಿವರಿಸಿದ ಇನ್ ವಾಯ್ಸ್ ಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಲೋಕೇಶ್ ಅವರಿಂದ ನನ್ನ ಇಲಾಖೆಗೆ ಯಾವುದೇ ತೆರಿಗೆ ಬಾಕಿ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತೆರಿಗೆ ಬಾಕಿ ಉಳಿಸಿದ ಬಗ್ಗೆ ಅವರ ಮೇಲೆ ಕಾನೂನು ಕ್ರಮ ಕೈಗೊಂಡಿದ್ದೀರಾ ಎಂದರೆ ಸಾಕ್ಷಿ ಈ ದಾವೆ ವ್ಯಾಟ್ ತೆರಿಗೆಗೆ ಸಂಬಂಧಿಸಿದ್ದಾಗಿದ್ದು 1 ನೇ ಪ್ರತಿವಾದಿ ಜಿ.ಎಸ್.ಟಿ ತೆರಿಗೆಯನ್ನೂ ಸಹ ಬಾಕಿ ಉಳಿಸಿಕೊಂಡಿದ್ದು ಅದರ ವಸೂಲಾತಿಗಾಗಿ ನಾವು ಅವರಿಗೆ ನೋಟೀಸು ನೀಡಿದ್ದೇವೆ ಎಂದು ನುಡಿಯುತ್ತಾರೆ. ಸದರಿ ನೋಟೀಸನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

3. ನನಗೆ ವಾದಿ ಹಾಗೂ ಪ್ರತಿವಾದಿಗಳ ಮಧ್ಯೆ ಆದ ವ್ಯವಹಾರ ಗೊತ್ತಿಲ್ಲ ಮತ್ತು 1 ನೇ ವಾದಿಯ ಮಾತು ಕೇಳಿಕೊಂಡು 1 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನಮಗೆ ಯಾವುದೇ ಜಿ.ಎಸ್.ಟಿ ತೆರಿಗೆಯಾಗಲೀ ಅಥವಾ ವ್ಯಾಟ್ ತೆರಿಗೆಯಾಗಲೀ ನೀಡಬೇಕಾಗಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ,

**(ಪ್ರಶಾಂತಿ**.ಜಿ)
**9** ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು, ಬೆಂಗಳೂರು.